ಫಾರೆಸ್ಟ್ ಇಲಾಖಾ.

ಮೊಕ್ಕಾಂ ಸುಕಾಲರಹಟ್ಟಿ, ತಾರೀಖು 7ನೆ ಸೆಪ್ಟಂಬರು 1903ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ—ಈ ಕೆಳಗಿನ ತಖ್ತೆಯಲ್ಲಿ ವಿವರಿಸಿರುವಂತೆ ಕಡೂರು ಡಿಸ್ಟ್ರಿಕ್ಟ್ ತರೀಕೆರೆ ಮತ್ತು ಬೆಂಕೀಪುರದ ಡಿಪೋಗಳಲ್ಲಿ ಆಯಾಯ ಡಿಪೋಗಳ ಬಾಜೂದಲ್ಲಿ ನಮೂದಿಸಿರುವಂತೆ ಆಯಾಯ ತಾರೀಖುಗಳಲ್ಲಿ ಕಡೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಹರಾಜು ಕೂಗಿಸಲ್ಪಡುತ್ತೆ :—

ನಂಬರು.	ಡಿಪೋ ಹೆಸರು.	ಹರಾಜು ತಾರೀಖು.	ನಾಟುಗಳ ಜಾತಿ.	ಸಲೆ ಅಡಿ: ನಾಟುಗಳ ಅದದು.	ಸಲೆ ಅಡಿ: ಅಡಿ.	ಷರಾ.
1	ತರೀಕೆರೆ ..	8ನೆ ಅಕ್ಟೋಬರು 1903	ಸಾಗ್ವಾನಿ ನಾಟುಗಳು ..	134	3,821	ಸ್ಥಳದಲ್ಲಿ ಹಾಜರಿರತಕ್ಕದ್ದು.
			ಸಾಗ್ವಾನಿ ತುಂಡುಗಳು ..	213	2,631	
			ಸಾಗ್ವಾನಿ ಬೆಲಗುಗಳು ...	799	1,773	
			ನಂದಿನಾಟೂ (ಬ್ಲೆ-ಟೀಕು) ...	27	788	
			ಮತ್ತಿನಾಟೂ ..	131	3,224	
			ಮತ್ತಿ ತೀರುಗಳು ...	210	419	
			ನಂದೀ ತೀರುಗಳು ..	8	24	
			ಯತ್ಯಾಗ (ಹಲ್ದ) ..	43	1,250	
			ಹುನ್ನಲ್ ನಾಟೂ ...	52	1,416	
			ಜಂಬೆ ಮತ್ತು ಜಾಲಾರಿ ಬೆಲಗು ..	105	700	
2	ಬೆಂಕೀಪುರ ...	10ನೆ ಅಕ್ಟೋಬರು 1903	ಸಾಗ್ವಾನಿ ನಾಟುಗಳು ...	150	4,000	
			ಮತ್ತಿ ನಾಟುಗಳು ...	50	1,500	

ಹರಾಜು ಷರತ್ತು :—1895ನೆ ಇಸವಿ ಏಪ್ರಿಲ್ 25ನೆ ಮುಕ್ರ್ರಂ ನಂಬರು 15ನೆ ಗೆಜಿಟ್ಟಿನಲ್ಲಿ ಘಾಯಿಷು ಆಗಿರುವ 95ನೆ ಇಸವಿ ಮಾರ್ಚಿ 10ನೆ ಮುಕ್ರ್ರಂ ನಂಬರು 1529—R. F.—155-92ನೆ ಇಸ್ತಿಹಾರಿನಂತೆ ನಡದುಕೊಳ್ಳಬೇಕು.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕಡೂರು ಡಿಸ್ಟ್ರಿಕ್ಟ್.

ಕೋಲಾರ ಡಿಸ್ಟ್ರಿಕ್ಟ್.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 27ನೆ ಆಗಸ್ಟ್ 1903.

1. ಕಂದಾಯದ ಬಾಕೀದಾರರಾದ ಹಿಂಡಿಗನಾಳ ಗ್ರಾಮದ ಕೋಲಾರದ ತಾ|| ಬಾಲನಾಗೇನಹಳ್ಳಿ ಕಾಯಂ ಗುತ್ತಾದಾರ್ 1ನೆ ಶೀನಣ್ಣನವರು 2ನೆ ರುಕ್ಮಿಣಮ್ಮನವರು ಇವರಿಂದ ಬರಬೇಕಾದ ಜಮಿರ್ಾ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರ ಸ್ವತ್ತು ಕೋಲಾರ ಡಿಸ್ಟ್ರಿಕ್ಟ್ ಕೋಲಾರ ತಾಲ್ಲೂಕು ಕಛೇರಿಯಲ್ಲಿ ಅಮಲ್ದಾರ್ ರೂಬರೂಬ್ 1903ನೆ ಇಸವಿ ಅಕ್ಟೋಬರ್ 15ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ದಿವಿ 12 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ವಿಕದಂ ಚಡ್ಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.